ಕರ್ನಾಟಕ ಪಲ್ಪ್‌ವುಡ್ ಲಿಮಿಟೆಡ್ ಬಗ್ಗೆ

೩೧೩. ಶ್ರೀ ಬಿ.ಎಚ್. ಬನ್ನಿಕೋಡ್ (ಹಿರೇಕೆರೂರ್).—ವಾಸ್ತ ಅರಣ್ಯ ಮತ್ತು ಪಶುಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಪಲ್ಪ್‌ವುಡ್ ಲಿಮಿಟೆಡ್ ಎಂಬ ಜಂಟೀ ಸೆಕ್ಟರ್ ಎಂದಿನಿಂದ ಅಸ್ತಿತ್ವದಲ್ಲಿ ಬಂದಿದೆ ?

ಆ) ಇದರ ಉದ್ದೇಶಗಳೇನು ?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನೆ ಮಂತ್ರಿಗಳು).—

ಅ) ಕರ್ನಾಟಕ ಪಲ್ಪ್‌ವುಡ್ ನಿಯಮಿತ ಜಂಟಿ ಸಂಸ್ಥೆ ದಿನಾಂಕ ೧೪-೨-೧೯೮೫ ರಿಂದ ಅಸ್ತಿತ್ವಕ್ಕೆ ಬಂದಿರುತ್ತದೆ.

ಆ ೧) ಈ ಸಂಸ್ಥೆಯ ಮೂಲ ಉದ್ದೇಶ ನೀಲಗಿರಿ ಮತ್ತು ಸರ್ವೇಸಾಮಾನ್ಯ ಮರಗಳನ್ನು ಹಾಗೂ ಶೀಘ್ರವಾಗಿ ಬೆಳೆಯುವ ಮರಗಳನ್ನು ಪಲ್ಪ್ ತಯಾರಿಸಲು ಬೆಳೆಸುವುದು ಮತ್ತು ನೆಡುತೋಪುಗಳನ್ನು ಬೆಳೆಸಿ ಅಭಿವೃದ್ಧಿ ಪಡಿಸುವುದು.

೨) ಮರೋತ್ಪನ್ನ ವಸ್ತುಗಳ ಟಿಂಬರ್ ಹಾಗೂ ಪಲ್ಪನ್ನು ಉತ್ಪಾದಿಸುವುದು ಬೆಳೆಸುವುದು ಕೊಳ್ಳುವುದು ಹಾಗೂ ಮಾರಾಟ ಮಾಡುವುದು.

ಕರ್ನಾಟಕ ಪಲ್ಪ್‌ವುಡ್‌ಲಿ ಗೆ ಹಂಚಲಾದ ಭೂಮಿಯ ಬಗ್ಗೆ

೩೧೪. ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು).—ವಾಸ್ತ ಅರಣ್ಯ ಮತ್ತು ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರವು ಕರ್ನಾಟಕ ಪಲ್ಪ್‌ವುಡ್ ಸಂಸ್ಥೆಗೆ ಯಾವ ತರದ ಭೂಮಿಯನ್ನು ಮಂಜೂರು ಮಾಡಿದೆ?

ಆ) ಹಾಗೂ ಎಷ್ಟು ಭೂಮಿಯನ್ನು ಮಂಜೂರು ಮಾಡಿದೆ. ಆ ಪೈಕಿ ಅರಣ್ಯ ಮತ್ತು ಕಂದಾಯ ಭೂಮಿ ಹಾಗೂ ಗೋಮಾಳ ಎಷ್ಟು ? (ಜಿಲ್ಲಾವಾರು, ತಾಲ್ಲೂಕುವಾರು ಗ್ರಾಮವಾರು ವಿವರ ಕೊಡುವುದು)

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನಾ ಮಂತ್ರಿಗಳು)—

ಅ) ಸರ್ಕಾರವು ಕರ್ನಾಟಕ ಪಲ್ಪ್‌ವುಡ್ ಸಂಸ್ಥೆಗೆ ಶಿವಮೊಗ್ಗ ಅರಣ್ಯ ವೃತ್ತದಲ್ಲಿ ೩೫೦೦ ಹೆಕ್ಟೇರ್ ಸಿ ಮತ್ತು ಡಿ ವರ್ಗಗಳ ಜಮೀನಿನಲ್ಲೂ ಹಾಗೂ ಕಿರು ಅರಣ್ಯ ಪ್ರದೇಶ ಭೂಮಿಯನ್ನು ಕೊಡುವಂತೆಯೂ ಮತ್ತು ಉಳಿದ ೨೬,೫೦೦ ಹೆಕ್ಟೇರ್ ಭೂಮಿಯನ್ನು ರಾಜ್ಯದಲ್ಲಿನ ಎಲ್ಲಿ ಸಿಕ್ಕಿದರೆ ಅಲ್ಲಿ ಸಿ ಮತ್ತು ಡಿ ವರ್ಗಗಳ ಜಮೀನಿನಲೂ ಇನಾಂ ಜಮೀನಿನಲ್ಲೂ ಹಾಗೂ ನೆಡು ತೋಪುಗಳನ್ನು ಬೆಳೆಸಲು ಯೋಗ್ಯವಾದಂತಹ ಕ್ಷೀಣಿತ ಅರಣ್ಯ ಪ್ರದೇಶದಲ್ಲೂ ಕೊಡುವಂತೆ ದಿನಾಂಕ ೧೫-೧-೧೯೮೬ರಲ್ಲಿ ಆದೇಶ ಹೊರಡಿಸಿದೆ.

ಆ) ಈವರೆವಿಗೂ ಸುಪ್ರೀಂಕೋರ್ಟ್ ತಡೆಯಾಜ್ಞೆ ನೀಡುವುದಕ್ಕಿಂತ ಮುಂಚೆ ೧,೨೬,೧೫೫.೬೮ ಹೆಕ್ಟೇರ್ ಭೂಮಿಯನ್ನು ಹಾಗೂ ಕೋರ್ಟಿನ ತಡೆಯಾಜ್ಞೆ ವಿರುದ್ಧ ೧೪,೫೬೦.೯೨ ಹೆಕ್ಟೇರ್ ಭೂಮಿಯನ್ನು ಅಂದರೆ ಒಟ್ಟಾರೆ ೨೭೦೭೬.೬೦ ಭೂಮಿಯನ್ನು ಕೆಲವು ಷರತ್ತುಗಳ ಮೇಲೆ ಕೊಡಲು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಾರ್ವತ್ರಿಕ)ರವರು ಆದೇಶ ನೀಡಿದ್ದಾರೆ. ಈಗಾಗಲೇ